ಈ ದಿನ ದಿನಾಂಕಃ 01.07.2026 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀಸವಾಲು ಪ್ರತಿವಾದಿ ಪರ ಶ್ರೀ ಎಸ್ ಬಿ ಪಿ ವಕೀಲರಿಂದಃ**

ಈ ಪ್ರಕರಣದ 2ನೇ ವಾದಿ ನನ್ನ ಗಂಡ ಎಂದರೆ ಸರಿ. ನಾನು ಈ ಪ್ರಕರಣವನ್ನು ಸಾಕಮ್ಮ, ಬಸಯ್ಯನವರ ವಿರುದ್ದ ಮಾತ್ರ ದಾಖಲು ಮಾಡಿರುತ್ತೇನೆ. ಈ ದಾವೆಯನ್ನು ದಾಖಲಿಸಲು ಮಾಹಿತಿಯನ್ನು ನನ್ನ ವಕೀಲರಿಗೆ ನಾನೇ ನೀಡಿರುತ್ತೇನೆ. ನಾನು ಈ ಪ್ರಕರಣದಲ್ಲಿ ಯಾವ ದಾಖಲೆಗಳನ್ನು ಸಲ್ಲಿಸಿರುತ್ತೇನೆ ಎಂಬ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಾನು 10ನೇ ತರಗತಿವರೆಗೂ ವಿದ್ಯಾಬ್ಯಾಸ ಮಾಡಿರುತ್ತೇನೆ. ನನ್ನ ಗಂಡ ಶಿಕ್ಷಕರಾಗಿದ್ದರು. ನನ್ನ ಗಂಡನ ಸ್ವಂತ ಊರು ಹೊಳಲ್ಕೆರೆ ತಾಲ್ಲೂಕಿನ ಕೆಂಗುಂಟೆ ಗ್ರಾಮ ಎಂದರೆ ಸರಿ. ನನ್ನ ಗಂಡ ದೋಣಿ ಹಳ್ಳಿ ಕಟ್ಟೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ದೋಣಿ ಹಳ್ಳಿ ಕಟ್ಟೆ ಗ್ರಾಮವು ಚನ್ನಗಿರಿಗೆ ಸಮೀಪ ಇರುವುರಿಂದ ನಾವು ಚನ್ನಗಿರಿಯಲ್ಲಿ ಬಾಡಿಗೆ ಮನೆ ಮಾಡಿಕೊಂಡು ಸುಮಾರು 30 ವರ್ಷಗಳಿಂದ ವಾಸವಾಗಿರುತ್ತೇವೆ. ನನ್ನ ಗಂಡ ಈಗ ಮೃತ ಪಟ್ಟಿರುತ್ತಾರೆ.

2. ದಾವಾ ಆಸ್ತಿಯನ್ನು ನಾವು ಓಂಕಾರಪ್ಪ ಎನ್ನುವವರಿಂದ ಖರೀದಿ ಮಾಡಿರುತ್ತೇವೆ. ಓಂಕಾರಪ್ಪನವರ ತಂದೆ ಹೆಸರು ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ಕ್ರಯಪತ್ರವನ್ನು ಓದಿದ್ದೀರಾ ಎಂದರೆ ನನಗೆ ನೆನಪಿಲ್ಲ. ದಾವಾ ಆಸ್ತಿಯು ಓಂಕಾರಪ್ಪನವರಿಗೆ ಯಾವ ರೀತಿ ಬಂದಿರುತ್ತದೆ ಎಂದು ನಾವು ತಿಳಿದುಕೊಂಡಿರುವುದಿಲ್ಲ. ನಾನು ಹಾಜರುಪಡಿಸಿರುವ ನಿಪಿ 8 ರ ಕ್ರಯಪತ್ರದಲ್ಲಿ ಓಂಕಾರಪ್ಪನವರು ಸರ್ವೆ ನಂ. 53/6ರ 11 ಗುಂಟೆ ಮತ್ತು ಸರ್ವೆ ನಂ. 54/1 ರ 14 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದುಕೊಂಡಿರುತ್ತೇನೆಂದು ಉಲ್ಲೇಖವಿದೆ ಎಂದರೆ ನನಗೆ ನೆನಪಿಲ್ಲ. ಸರ್ವೆ ನಂ. 53/6ರ 11 ಗುಂಟೆ ಮತ್ತು ಸರ್ವೆ ನಂ. 54/1 ರ 14 ಗುಂಟೆ ಜಮೀನನ್ನು ಓಂಕಾರಪ್ಪನವರ ಖರೀದಿ ಮಾಡಿರುವ ಸಂಬಂಧ ಸದರಿ ಕ್ರಯಪತ್ರಗಳನ್ನು ನಾನು ನೋಡಿರುವುದಿಲ್ಲ.

3. ಓಂಕಾರಪ್ಪನವರು ಖರೀದಿ ಮಾಡಿರುವ ಜಮೀನನ್ನು ಭೂಪರಿವರ್ತನೆ ಮಾಡಿರುವುದಕ್ಕೆ ಸಂಬಂಧಿಸಿದಂತೆ ಭೂಪರಿವರ್ತನ ಆದೇಶದ ಪ್ರತಿಯನ್ನು ನಾನು ನೋಡಿರುವುದಿಲ್ಲ ಹಾಗೂ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಯಾವುದೇ ಅಪ್ರೂವ್ಡ್ ಲೇಔಟ್ ಪ್ಲಾನ್ ನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

4. ದಾವಾ ಆಸ್ತಿಯು ಮುದ್ದೇನಹಳ್ಳಿ ಗ್ರಾಮದಲ್ಲಿ ಇದ್ದು ಮುದಿಗೆರೆ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಬರುತ್ತದೆ. ದಾವಾ ಆಸ್ತಿಯನ್ನು ನಾವು ದಿಃ 23.07.2004 ರಂದು ಖರೀದಿ ಮಾಡಿರುತ್ತೇವೆ. ನಾವು ಕ್ರಯಕ್ಕೆ ಪಡೆದಿರುವ ಸ್ವತ್ತಿನ ಖಾತೆ ಸಂ. 143 ಮತ್ತು ಸೈಟ್ ನಂ.6 ಆಗಿರುತ್ತದೆ. ನಾನು ಖರೀದಿ ಮಾಡಿರುವ ಸ್ವತ್ತಿನ ಚೆಕ್ಕುಬಂದಿಯು ಪೂರ್ವಕ್ಕೆ ಸಾಕಮ್ಮನವರ ಮನೆ, ಪಶ್ಚಿಮಕ್ಕೆ ಮಂಗಳರವರ ಸೈಟ್, ಉತ್ತರಕ್ಕೆ ಪಂಚಾಯಿತಿ ರಸ್ತೆ ಮತ್ತು ದಕ್ಷಿಣಕ್ಕೆ ಚಿಗಟೇರಪ್ಪನವರ ಹೊಲ ಇರುತ್ತದೆ. ನಾವು ಖರೀದಿ ಮಾಡಿರುವ ಸ್ವತ್ತಿಗೆ ನನ್ನ ಮತ್ತು ನನ್ನ ಗಂಡನ ಹೆಸರಿಗೆ ಜಂಟಿಯಾಗಿ ಇ-ಖಾತಾ ಬಂದಿರುತ್ತದೆ.

5. ನಾನು ಹಾಜರುಪಡಿಸಿರುವ ನಿಪಿ 2 ರ ಕಂದಾಯ ರಶೀದಿಯು ಖಾತೆ ನಂ. 143 ಕ್ಕೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ಮತ್ತು 2 ರ ರಶೀದಿಗಳು ದಾವಾ ಆಸ್ತಿಗೆ ಸಂಬಂದಿಸಿದ ರಶೀದಿಗಳಲ್ಲ ಎಂದರೆ ನನಗೆ ಗೊತ್ತಿಲ್ಲ. ನಾವು ಪ್ರಕರಣ ದಾಖಲಿಸುವಾಗ ನಮ್ಮ ಅತ್ತೆಯ ಆರೋಗ್ಯ ಸರಿ ಇಲ್ಲದೇ ಇದ್ದರಿಂದ ಕೆಂಗುಂಟೆ ಗ್ರಾಮಕ್ಕೆ ಹೋಗಿರುತ್ತೇವೆಂದು ಹೇಳಿರುತ್ತೇನೆ ಎಂದರೆ ಸರಿ. ನನ್ನ ಗಂಡ ಚನ್ನಗಿರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಅತ್ತೆಗೆ ಯಾವಾಗಿನಿಂದ ಯಾವಗಿನವರೆಗೂ ಹುಷಾರಿರಲಿಲ್ಲ ಎಂದು ನನಗೆ ಹೇಳಲು ಆಗುವುದಿಲ್ಲ. ನನ್ನ ಅತ್ತೆಗೆ ಆರೋಗ್ಯ ಸರಿ ಇಲ್ಲದಿದ್ದ ಸಮಯದಲ್ಲಿ ನನ್ನ ಮಕ್ಕಳು ಚನ್ನಗಿರಿಯಲ್ಲಿ ವಿದ್ಯಾಬ್ಯಾಸ ಮಾಡುತ್ತಿದ್ದರು ಎಂದರೆ ಸರಿ.

6. ದಾವಾ ಆಸ್ತಿಯು ಖಾಲಿ ಜಾಗ ಎಂದರೆ ಸರಿ. ದಾವಾ ಆಸ್ತಿಯನ್ನು ನಾವು ಖರೀದಿ ಮಾಡಿದಾಗ ಎಷ್ಟು ವಿಸ್ತೀರ್ಣವಿತ್ತೋ ಅಷ್ಟೇ ವಿಸ್ತೀರ್ಣ ಈಗಲೂ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಅಳತೆಯನ್ನು ಮುದಿಗೆರೆ ಪಂಚಾಯಿತಿಯವರು ಮಾಡಿರುತ್ತಾರೆ. ದಾವಾ ಆಸ್ತಿಯನ್ನು

ಮುದಿಗೆರೆ ಪಂಚಾಯಿತಿಯವರು ಅಳತೆ ಮಾಡಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ವಕೀಲರಿಗೆ ನೀಡಿರಬಹುದು. ನಾನು ಮುದಿಗೆರೆ ಪಂಚಾಯಿತಿಯವರು ದಾವಾ ಆಸ್ತಿಯನ್ನು ಅಳತೆ ಮಾಡಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಯಾವುದೇ ಸ್ವತ್ತನ್ನು ಅಳತೆ ಮಾಡುವ ಮುನ್ನಾ ಬಾಜುದಾರರಿಗೆ ನೋಟಿಸ್ ನೀಡಬೇಕು ಎಂದರೆ ನಾವು ಅಳತೆ ಮಾಡಿಸಿರುವುದಿಲ್ಲ ಬೇರೆಯವರು ಮಾಡಿಸಿರುತ್ತಾರೆ.

7. ದಾವಾ ಆಸ್ತಿಯ ಲೇಔಟ್ ನಲ್ಲಿ ಒಟ್ಟು 8 ರಿಂದ 10 ಸೈಟ್ ಗಳು ಇರುತ್ತವೆ. ದಾವಾ ಆಸ್ತಿಯ ಲೇಔಟ್ ನಲ್ಲಿ ಒಟ್ಟು 20 ಸೈಟುಗಳು ಇರುತ್ತವೆ ಎಂದರೆ ಇರಬಹುದು. ನಮಗೆ ದಾವಾ ಆಸ್ತಿಯನ್ನು ಅಗಲ 28 ಅಡಿ ಉದ್ದ 40 ಅಡಿಯನ್ನು ನೀಡಿರುತ್ತಾರೆ. ನಮ್ಮ ಸ್ವತ್ತಿನ ಲೈನ್ ನಲ್ಲಿರುವ ಸೈಟುಗಳ ಪೈಕಿ ಬಸಯ್ಯ ಮತ್ತು ಇನ್ನೊಬ್ಬರು ಮಾತ್ರ ಮನೆ ಕಟ್ಟಿರುತ್ತಾರೆ.

8. ಸೈಟ್ ನಂ. 5 ನ್ನು ಬಸಯ್ಯನವರು 2008 ನೇ ಇಸವಿಯಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಬಸಯ್ಯನವರ ಸೈಟ್ ನ ಖಾತೆ ಸಂ. 182/5 ಮತ್ತು ಸೈಟ್ ನಂ. 5 ಎಂದರೆ ನನಗೆ ಗೊತ್ತಿಲ್ಲ. ಬಸಯ್ಯನವರು ಎಷ್ಟು ವಿಸ್ತೀರ್ಣದ ಸೈಟನ್ನು ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದಲ್ಲಿ ಬಸಯ್ಯನವರ ಹೆಂಡತಿ ಸಾಕಮ್ಮರವರನ್ನು 1ನೇ ಪ್ರತಿವಾದಿಯನ್ನಾಗಿ ಮಾಡಿರುತ್ತೇನೆ ಎಂದರೆ ಸರಿ. ವಾಸ್ತವದಲ್ಲಿ ಖಾತೆ ಸಂ.5 ರ ಸ್ವತ್ತನ್ನು ಬಸಯ್ಯನವರು ಖರೀದಿ ಮಾಡಿರುತ್ತಾರೆ ಎಂದರೆ ಮಾಡಿರುತ್ತಾರೆ. ನಮ್ಮ ಬಾಜುವಿನಲ್ಲಿರುವ ಸೈಟ್ ನಂ. 7 ನ್ನು 2ನೇ ಪ್ರತಿವಾದಿಯಾದ ಮಂಗಳರವರೇ ಖರೀದಿ ಮಾಡಿರುತ್ತಾರೆ. ದಾವಾ ಆಸ್ತಿಯನ್ನು ನಾವು ದಿಃ 20.06.2023 ರಂದು ಅಳತೆ ಮಾಡಿಸಿರುತ್ತೇವೆ ಎಂದು ನಮ್ಮ ದಾವಾ ಪತ್ರದಲ್ಲಿ ಹೇಳಿರುತ್ತೇವೆ ಎಂದರೆ ಸರಿ.

ಮುಂದುವರೆದ ಪಾಟೀಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.